ಅಧ್ಯಕ್ಷರು: ಮಂತ್ರಿಗಳು ಬಂದಾಗ ಉತ್ತರ ಕೊಡುತ್ತಾರೆ.

ಶ್ರೀ ಎ.ರಾಮದಾಸ್: ಮಾನ್ಯ ಸಭಾಧ್ಯಕ್ಷರೇ, ಪ್ರಶ್ನೆಯನ್ನು ಕಳುಹಿಸಿಕೊಟ್ಟು ಉತ್ತರ ಕೊಡಿ ಎಂದು ಆದೇಶ ಮಾಡಿದ್ದಾರೆ. ಉತ್ತರ ಬಂದಿದೆ ಎಂದು ಅದರ ಮೇಲೆ ಇದೆ. ಬಂದ ನಂತರವೂ ಸದನದಲ್ಲಿ ಉತ್ತರ ಹೇಳುವಂಥ ವ್ಯವಸ್ಥೆ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ಅವರು ಪ್ರಸ್ತಾಪ ಮಾಡಿದ್ದಾರೆ, ಉತ್ತರ ಕೊಡುವುದು ಸರ್ಕಾರಕ್ಕೆ ಸಂಬಂಧಪಟ್ಟಂಥಾದ್ದು. ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಡಿ.ಬಿ.ಚಂದ್ರೇಗೌಡ: ಬಾಯಿಗೆ ಬಂದ ಹಾಗೆ ಕೂಗುವುದಕ್ಕಲ್ಲ ಈ ಸಭೆ ಇರುವುದು. ಸರ್ಕಾರಕ್ಕೂ ಜವಾಬ್ದಾರಿ ಇದೆ. ನಿಯಮಗಳ ಪ್ರಕಾರ ಕೇಳುವುದಕ್ಕೆ ನಿಮಗೆ ಅವಕಾಶವಿದೆ. ಇಲ್ಲದಿದ್ದರೆ ನಿಯಮಗಳ ಈ ಪುಸ್ತಕವನ್ನು ಸುಟ್ಟು ಹಾಕಿ ಬಿಡೋಣ. ನಿಯಮಗಳನ್ನು ಬಳಕೆ ಮಾಡಿಕೊಳ್ಳದೇ....

ಶ್ರೀ ಎ.ರಾಮದಾಸ್: ನಿಯಮಗಳ ಅಡಿಯಲ್ಲೇ ಶೂನ್ಯ ವೇಳೆ ಪ್ರಸ್ತಾಪವನ್ನು ಕಳುಹಿಸಿದ್ದಾರೆ. ಉತ್ತರ ಬಂದಿದೆ ಎಂದು ಅದರ ಮೇಲೆ ಬರೆದಿದ್ದಾರೆ.

ಅಧ್ಯಕ್ಷರು: ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲದೇ ಇರುವಾಗ, ಉತ್ತರ ಕೊಡಿ ಎಂದು ನೀವು ಸರ್ಕಾರಕ್ಕೆ ಒತ್ತಾಯ ಮಾಡುವ ಹಾಗಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಶೂನ್ಯವೇಳೆಯಲ್ಲಿ ಎತ್ತತಕ್ಕಂಥ ವಿಷಯಗಳಿಗೆ ಉತ್ತರ ಕೊಡುವ ಹಾಗೆ ಸರ್ಕಾರದ ಮೇಲೆ ಒತ್ತಡ ತರಲು ಆಗುವುದಿಲ್ಲ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಉತ್ತರ ಹೇಳಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಈಗ ಮಂತ್ರಿಗಳು ಸದನದಲ್ಲಿ ಇಲ್ಲ, ಉತ್ತರ ಕೊಡಲು ಆಗುವುದಿಲ್ಲ ಎಂದು ಮೊದಲೇ ಹೇಳಿದೆನಲ್ಲ. ನೀವು ಕೇವಲ ವಿಷಯವನ್ನು ಪ್ರಸ್ತಾಪಿಸಬಹುದು ಅಷ್ಟೇ.

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಎ.ನಾರಾಯಣಸ್ವಾಮಿಯವರು ಸದನದ ಬಾವಿಗೆ ಧರಣಿ ನಡೆಸಲು ಬಂದರು)

ಶ್ರೀ ಡಿ.ಬಿ.ಚಂದ್ರೇಗೌಡ: ಸದಸ್ಯರ ನಡವಳಿಕೆಗೂ ಒಂದು ಮಿತಿ ಇರುತ್ತದೆ.

ಅಧ್ಯಕ್ಷರು: ಪ್ರತಿಯೊಂದು ಸಣ್ಣ ವಿಷಯಕ್ಕೂ ಇಲ್ಲಿ ಬಂದು ಕುಳಿತುಕೊಂಡರೆ ಹೇಗೆ? ಇದು ಸಂಸದೀಯ ನಡವಳಿಕೆಯಲ್ಲ. ಉತ್ತರ ಕೊಡಲು ಮಂತ್ರಿಗಳು ಈಗ

ಇಲ್ಲಿ ಇಲ್ಲವೆಂದು ಹೇಳಿದರೂ ಮತ್ತೆ ಅದನ್ನೇ ಕೇಳುತ್ತಿದ್ದರೆ ಹೇಗೆ?

(ಎ.ನಾರಾಯಣಸ್ವಾಮಿಯವರು ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಡಿ.ಬಿ.ಚಂದ್ರೇಗೌಡ: ಸುರೇಶ್ ಕುಮಾರ್‌ರವರೇ, ಇದನ್ನು ನೀವು ಸರಿಪಡಿಸದಿದ್ದರೆ ಖಂಡಿತಾ ಶಾಸನಸಭೆಗೆ ಗೌರವ ಬರುವುದಿಲ್ಲ.

ಅಧ್ಯಕ್ಷರು: ಮಂತ್ರಿಗಳು ಬಂದ ಮೇಲೆ ಉತ್ತರ ಕೊಡಿಸುತ್ತೇನೆ ಎಂದು ಹೇಳಿದರೂ ಅವರು ಇಲ್ಲದೇ ಇದ್ದಾಗ ಏಕೆ ಪ್ರಸ್ತಾಪ ಮಾಡಬೇಕು? ಈಗ ಮುಂದಿನ ವಿಷಯ, ಸಿಂಧ್ಯಾರವರೇ ನೀವು ಪ್ರಸ್ತಾಪ ಮಾಡಿ.

12-30 ಪಿ.ಎಂ

ಆ) ವಿಷಯ: ರಾಜ್ಯದ ಹೆದ್ದಾರಿಗಳಲ್ಲಿ ಅಪಘಾತಗಳು ಹೆಚ್ಚುತ್ತಿರುವುದು.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ ಬಹಳ ಆತಂಕಕಾರಿಯಾದಂಥ ಒಂದು ವಿಚಾರದ ಬಗ್ಗೆ ಮಾನ್ಯ ಸಾರಿಗೆ ಸಚಿವರು ಹಾಗೂ ಮಾನ್ಯ ಗೃಹ ಇಲಾಖೆಯ ಮಂತ್ರಿಗಳ ಗಮನವನ್ನು ಸೆಳೆಯಲಿಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ಏಕೆಂದರೆ ಇದು ಕೇವಲ ಸರ್ಕಾರಕ್ಕಷ್ಟೇ ಸಂಬಂಧಪಟ್ಟಂತಹ ವಿಚಾರವಲ್ಲ. ಕಾರಣವೇನೆಂದರೆ, ರಾಜ್ಯದಲ್ಲಿ ಕಳೆದ 2-3 ತಿಂಗಳುಗಳಲ್ಲಿ ಅಪಘಾತಗಳು ಬಹಳ ದೊಡ್ಡ ಸಂಖ್ಯೆಯಲ್ಲಿ ಆಗುತ್ತಿವೆ. ಬಿಜಾಪುರ ಜಿಲ್ಲೆಯಲ್ಲಿ ಒಂದೇ ಕುಟುಂಬಕ್ಕೆ ಸೇರಿದ ಸುಮಾರು 13 ಜನರು ಸತ್ತು ಹೋಗಿದ್ದಾರೆ. ಇವತ್ತು ನಮ್ಮ ರಾಜ್ಯದ ಪ್ರಮುಖ ದಿನಪತ್ರಿಕೆಯಾದ ಪ್ರಜಾವಾಣಿಯಲ್ಲಿ ಬಂದಿರುವಂಥ ಆ ಧಾರುಣವಾದ ದೃಶ್ಯವನ್ನು ನೋಡಿದರೆ ಎಂಥವರ ಮನಸ್ಸು ಸಹ ಕರಗುತ್ತದೆ. ಹೀಗೆ ದಿನಕ್ಕೊಂದರಂತೆ ಅಪಘಾತವಾಗಿ ಹತ್ತಾರು ಸಾವುಗಳು ಆಗುತ್ತಿವೆ. ನನಗೆ ತಿಳುವಳಿಕೆ ಇರುವ ಹಾಗೆ ನಮ್ಮ ರಾಜ್ಯದಲ್ಲಿ ಪ್ರತೀ ವರ್ಷ ಸುಮಾರು ಮೂರರಿಂದ ಮೂರೂವರೆ ಸಾವಿರ ಜನರು ಅಪಘಾತಗಳಲ್ಲಿ ಸಾಯುತ್ತಾರೆ. ಆದರೆ ಕಳೆದ 2-3 ತಿಂಗಳುಗಳಲ್ಲಿ ಅಪಘಾತಗಳು ಏಕೆ ಹೆಚ್ಚಾಗುತ್ತಿವೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಸಾಮಾನ್ಯವಾಗಿ ಮಳೆಗಾಲ ಪ್ರಾರಂಭವಾಗಿ ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಜಡಿಮಳೆ ಇರುವುದರಿಂದ ಇಂಥ ಸಂದರ್ಭಗಳಲ್ಲಿ ಅಪಘಾತಗಳು ಹೆಚ್ಚಾಗುತ್ತವೆ. ದಿನಕ್ಕೆ 10 ರಿಂದ 15 ಜನ ಅಪಘಾತಗಳಲ್ಲಿ ಸಾಯುತ್ತಾರೆಂದರೆ ಈ ತಿಂಗಳುಗಳಲ್ಲಿ ಏನೇನು ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಶ್ರೀ ದಿನಕರ್ ಅವರು ಡಿ.ಐ.ಜಿ. ಆಗಿದ್ದಂಥ ಸಂದರ್ಭದಲ್ಲಿ ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದಾರೆ. ಇನ್ನು ಮ್ಯಾಕ್ಸಿಕ್ಯಾಬ್ ಮತ್ತು ಟೆಂಪೋಗಳಿಗೆ 10 ರಿಂದ 15 ಜನರನ್ನು